Doc- 525
T.P-2

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಅ ಶೋ ಕಾ ಫಾ ರ್ಮ ಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing

L. N. Press

Sivarampet, Mysore

Regd No M 1299 — SRI — 31—1—1958

42nd Year - 'Satyavadi' Mysore

ಸತ್ಯವಾದಿ

ಸ್ಥಾಪಕರು— ಅರಮನೆ ಸಿಂಹೇದಾರ್ ಎಂ. ವಿ. ಸುಬ್ಬಂರಾಯರು [ಬಿಡಿಪ್ರತಿ 3 ಪೈ

ಪ್ರಮುಖ ವರ್ತಮಾನಗಳಿಗೆ

ಆಕರ್ಷಣೀಯ ಲೇಖನಗಳಿಗೆ

" ಸತ್ಯವಾದಿ " ಪತ್ರಿಕೆಯನ್ನು

ತಪ್ಪದೇ ಓದಿ

ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ ವಾರಾಂತ್ಯ ಪತ್ರಿಕೆ

ವಾರ್ಷಿಕಚಂದಾ ಅಂಚೆವೆಚ್ಚಸೇರಿ 1-80

ಸೆಮಿನಾರ್ ಉದ್ಘಾಟನೆ

ಕಮ್ಯುನಿಟಿ ಡೆವೆಲಪ್‌ಮೆಂಟಿನ ವೈಸೂರು ವಿಭಾಗದ ಸೆಮಿನಾರಿನ ಉದ್ಘಾಟನೆಯನ್ನು ಕೊಡಗು ಜಿಲ್ಲೆಯ ಕುಡಿಗೆಯಲ್ಲಿ ವ್ಯವಸಾಯ ಮಂತ್ರಿ ಶ್ರೀ ಹೆಚ್. ಎಸ್. ರುದ್ರಪ್ಪನವರು ಉದ್ಘಾಟಿಸುವರು. ಯೋಜನೆ ಮತ್ತು ಅಭಿವೃದ್ಧಿ ಉಪ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಡೆಯವರು ಅಧ್ಯಕ್ಷತೆ ವಹಿಸುವರು. ಈ ಕಾರ್ಯಕ್ರಮ ಫೆಬ್ರವರಿ 6 ನೆಯ ತಾ|| ಬೆಳಿಗ್ಗೆ 10 ಗಂಟೆಗೆ ಇದೆ. ಈ ಸೆಮಿನಾರಿನ ಮುಕ್ತಾಯ ಸಮಾರಂಭವನ್ನು 8 ನೇ ತಾ|| ಬೆಳಿಗ್ಗೆ 11-30 ಗಂಟೆಗೆ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ನೆರವೇರಿಸುವರು.

ಹರಿಕಥೆ

ಮೈಸೂರು ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದಲ್ಲಿ ಈ ಸಂಜೆ 6-30 ಗಂಟೆಗೆ ಕೀರ್ತನ ಕೇಸರಿ ಶ್ರೀ ಶ್ರೀಪಾದಶಾಸ್ತ್ರಿಗಳವರಿಂದ ಭಕ್ತ ಸುಧಾಮ ಎಂಬ ಹರಿಕಥೆ ಏರ್ಪಾಟಾಗಿದೆ. ಸರ್ವರೂ ದಯವಿಟ್ಟು ಮಾಡಿಸಬೇಕಾಗಿ ಕೋರಿದೆ. ಕಳೆದ ರಾತ್ರಿ ಶ್ರೀ ಶ್ರೀಪಾದಶಾಸ್ತ್ರಿಗಳವರಿಂದ ಕೆರಾತಾರ್ಜುನೀಯ ಎಂಬ ಹರಿಕಥೆ ನಡೆದನಂತರ, ಶ್ರೀ ಸಿ. ಸಂಜೀವಯ್ಯನವರು ಭಾಷಣ ಮಾಡುತ್ತಾ, ಡಾ|| ಬಿ. ಜಿ. ದಾಸರವರು ದೇಶಸೇವೆ, ಜನಸೇವೆ ಮಾಡುತ್ತಿರುವುದು ಮಾತ್ರವಲ್ಲದೆ ಧರ್ಮ ಸೇವೆ ಸಹಾ ಮಾಡುತ್ತಿರುವರು ಎಂದರು. ಶ್ರೀ ಶ್ರೀಪಾದಶಾಸ್ತ್ರಿಗಳವರನ್ನು ಸನ್ಮಾನಿಸಿ ವಂದನಾರ್ಪಣೆಯನ್ನು ಅವರು ಕೋರಿದರು.

ಕಳೆದ ವರ್ಷ ನವೆಂಬರ್ 1 ರಲ್ಲಿ ಅಂಧವಾದ ಪ್ರಸ್ತುತ ಸಾಗ್ಗಿಯಲ್ಲಿ ಈ ವರ್ಷ ಜನವರಿ 15 ರ ವರೆಗೆ 7-02 ಲಕ್ಷ ಟ್ಯೂ ಸಕ್ಕರೆಯನ್ನು ದೇಶದಲ್ಲಿ ಉತ್ಪಾದಿಸಲಾಯಿತು.

ನಮ್ಮ ಭಾರತ

ಗೋವಿಂದಳ್ಳಿಯಲ್ಲಿ ಅಲೆದಾಡುವ ಈ ವರ್ಗದ ರೋಮಿಯೋಗಳಿಗೆ ಅವರ ಅಪರಾಧಕ್ಕೆ ಶಿಕ್ಷೆ ಕೊಟ್ಟಿಯಾಯಿತು. 20 ವರ್ಷಗಳಿಗೆ ಕಡಿಮೆ ಇರುವ ಅವರೀರ್ವರು ಅವರ ಮೊಕಲ್ಲದ ಇಬ್ಬರು ಹುಡುಗಿಯರಲ್ಲಿ ಪ್ರೇಮಬಿದ್ದಿರು. ತಿಳ್ಳಿ ಹೊಡೆದು ಹುಡುಗಿಯರನ್ನು ಹಿಂಸಿಸಲಾರಂಭಿಸಿದರು. ರೋಮಿಯೋಗಳಿಂದ ಆಗುತ್ತಿದ್ದ ತೊಂದರೆಗಳನ್ನು ತಂಗಿಯರು ಅಳುತ್ತಾ ಅವರ ಅಣ್ಣಂದಿರಿಗೆ ತಿಳಿಸಿದರು. ನ್ಯಾಯ ಬೇಗ ದೊರೆಯಿತು. ದೃಢಕಾಯರಾದ ಅಣ್ಣಂದಿರಿಂದ ದಾರಿಕಾಯುತ್ತಿದ್ದ ಪ್ರೇಮಪೀಡಿತರು ಹೆಗಲಿನ ಮೇಲೆ ಕುಳ್ಳಿರಿಸಲ್ಪಟ್ಟು ಕರೆದೊಯ್ಯಲ್ಪಟ್ಟರು. ಅವರನ್ನು ಕೋಣೆಯೊಂದರಲ್ಲಿ ಕೂಡಿ, ತೀಪೆಯಾಗಿ ಬೋಳುತಲೆ ಮಾಡಲಾಯಿತು. ಅವರ ಮುಖಕ್ಕೆ ಮಸಿ ಬಳೆಯಲಾಯಿತು. ಅವರಿಗೆ ಬಲವಂತದಿಂದ ಚಿಂದಿ ಸೀರೆ ಉಡಿಸಿ ಹಣೆಯ ಮೇಲೆ ಚಂದ್ರದಿಂದ ಗುರುತು ಮಾಡಿ ಬೀದಿಗೆ ಕಳುಹಿಸಲಾಯಿತು.

ತನ್ನ ಮಾವ, ಅತ್ತೆ, ಭಾವ ಮೈದುನ ಮತ್ತು ನಾದಿನಿಯನ್ನು ಕೊಲೆ ಮಾಡಿದ 25 ವರ್ಷದ ಪಾಕಿಸ್ತಾನ ರಾಷ್ಟ್ರೀಯ ಮಹಮದ್ ಹನೀಫನಿಗೆ ಹೈಕೋರ್ಟು ಮರಣದಂಡನೆಯನ್ನು ಖಾಯಂ ಮಾಡಿತೆಂದು ಅಲಹಾಬಾದು ವಾರ್ತೆ. ಶಿಕ್ಷೆಗೆ ಒಳಗಾಗಿರುವವನು ಹೆಂಡತಿ ಸತ್ತನಂತರ 12 ವರ್ಷದ ತನ್ನ ನಾದಿನಿ ಜಬೀದಳನ್ನು ಮದುವೆ ಮಾಡಿಕೊಡೆಂದು ಕೇಳಿ, ಮಾವ ತಿರಸ್ಕರಿಸಿದನೆಂದು ಈ ಕೃತ್ಯ ಮಾಡಿದನಂತೆ.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

1 ದ್ವಾದಶಿ ಆರ್ದ್ರಾ

ಭಾರತ ಅಣು ಬಾಂಬು ಉಪಯೋಗಿಸುವುದಿಲ್ಲ

ಬ್ಯಾಂಕುಗಳ ರಾಷ್ಟ್ರೀಕರಣ ಅಗತ್ಯ

ಅಖಿಲ ಭಾರತ ಬ್ಯಾಂಕು ನೌಕರರ 3 ದಿನಗಳ 9 ನೇ ವಾರ್ಷಿಕ ಅಧಿವೇಶನವನ್ನು ವಾರಣಾಸಿಯಲ್ಲಿ ನಿನ್ನೆ ಪಾರ್ಲಿಮೆಂಟು ಸದಸ್ಯರಾದ ಶ್ರೀ ರಘುನಾಥ ಸಿಂಗ್ ಉದ್ಘಾಟಿಸುತ್ತಾ, ದೇಶದ ಪ್ರಗತಿಗೆ ಮಾತ್ರವಲ್ಲ, ಅದರ ಭವ್ಯತೆಗೂ ಬ್ಯಾಂಕುಗಳ ರಾಷ್ಟ್ರೀಕರಣ ಅಗತ್ಯ ಎಂದರು.

ಭೂ ಸುಧಾರಣೆ

62 ನೇ ವರ್ಷದೊಳಗೆ ಮಹಾ ಚುನಾವಣೆಗೆ ಮೊದಲು ಕಾಂಗ್ರೆಸು ಪ್ರಾಂತಗಳಲ್ಲಿ ಭೂ ಸುಧಾರಣೆ ಜಾರಿ ಆಗುವಂದೆಂದು ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಅಲ್ಲೂರಿ ಸತ್ಯನಾರಾಯಣ ರಾಜು ಹೈದರಾಬಾದಿನಲ್ಲಿ ತಿಳಿಸಿದ್ದಾರೆ.

ಜನಮನದಲ್ಲಿ ಗಾಂಧೀಜಿ

ನವ ದೆಹಲಿ 30 — ಗಾಂಧೀಜಿ ಅಮರಾದ ವಾರ್ಷಿಕ ದಿನಾಚರಣೆಯ ಬಹಿರಂಗ ಸಭೆಯಲ್ಲಿ ಪಂ|| ನೆಹರು ಭಾಷಣ ಮಾಡುತ್ತಾ, ಮಹಾತ್ಮ ಗಾಂಧಿಯವರು ನಿಧನರಾಗಿ 10 ವರ್ಷಗಳು ಆದಾಗ್ಯೂ ಅವರು ಜನತೆಯ ಮನಸ್ಸಿನಲ್ಲಿ ಉಳಿದಿರುವರು ಎಂದರು.

**

ಮೈಸೂರು ಪ್ರಾಂತದ ವ್ಯವಸಾಯ ಮಂತ್ರಿ ಶ್ರೀ ರುದ್ರಪ್ಪನವರು ಬೆಂಗಳೂರಿನಲ್ಲಿ ಹೇಳಿಕೆಯೊಂದರಲ್ಲಿ ಮೈಸೂರಿನಲ್ಲಿ ಮುಕ್ತ 5 ಲಕ್ಷ ಟ್ಯೂ ಹೆಚ್ಚು ಆಹಾರ ಧಾನ್ಯ ಬೆಳೆಯುವ ಬಗ್ಗೆ ಸರ್ವ ಪ್ರಯತ್ನಗಳನ್ನೂ ಮಾಡಲಾಗುವುದೆಂದರು.

ನವ ದೆಹಲಿ 30— ಮುಂದಿನ ನಾಲ್ಕೈದು ವರ್ಷಗಳಲ್ಲಿ ಭಾರತ ಅಣು ಬಾಂಬುಗಳನ್ನು ತಯಾರಿಸುವಂಥಾಗಬಹುದು, ಆದರೆ ನಾವದನ್ನು ಮಾಡುವದಿಲ್ಲ ಮತ್ತು ಏನೇ ಆಗಲಿ ನಾವು ಅದರ ಉಪಯೋಗ ಮಾಡುವುದಿಲ್ಲ ಎಂದು ಗಾಂಧೀಜಿ ಅಮರರಾದ 10 ನೇ ವಾರ್ಷಿಕ ದಿನಾಚರಣೆಯಲ್ಲಿ ಪಂ|| ನೆಹರು ಭಾಷಣ ಮಾಡುತ್ತಾ ತಿಳಿಸಿದರು. ಎಷ್ಟುದ ರಾಷ್ಟ್ರವೊಂದಕ್ಕೆ ಅಣು ಆಯುಧ ಕೊಡುವುದು ವಿನಾಶಕಾರಕವೆಂದು ಪಂ|| ನೆಹರು ತಿಳಿಸಿದರು.

ಸೆನೇಟರ್ ಎಚ್ಚರಿಕೆ

ಬಾಗ್ದಾದು ಒಪ್ಪಂದದ ರಾಷ್ಟ್ರಗಳಾದ — ಇರಾಕ್, ಇರಾನ್ ಮತ್ತು ಪಾಕಿಸ್ತಾನಕ್ಕೆ ಅಣು ಆಯುಧ ಸಂಬಂಧ ರಾಜಿ ಮಾಡುವುದರ ವಿರುದ್ಧ ಅಮೇರಿಕ ಸೆನೇಟರಾದ ಹ್ಯೂಬರ್ಟ್ ಹಂಫರಿ ಎಚ್ಚರಿಸಿರುವುದಾಗಿ ನ್ಯೂಯಾರ್ಕ್ ವಂದಿ

ಕಾಶ್ಮೀರ ಭಾರತದ್ದು

ನವ ದೆಹಲಿ 30 — ಕಾಶ್ಮೀರ ಭಾರತದ ಭಾಗ. ನಾವು ಯಾವ ಬೆದರಿಕೆಗೂ ಭಾರತದ ವಿಭಜನೆಗೆ ಮಾತ್ರ ಒಪ್ಪುವದಿಲ್ಲ ಎಂದು ಪಂ|| ನೆಹರು ತಿಳಿಸಿದರು.

ಅನ್ನ ತ್ಯಜಿಸಿದರು

ಕಾನೂನುಭಂಗ ಚಳವಳಿ ಸಂಬಂಧದಲ್ಲಿ ಬಂಧಿತರಾಗಿ ಬೆಂಗಳೂರು ಕೇಂದ್ರ ಜೈಲಿನಲ್ಲಿರುವ ಸೋಷಲಿಸ್ಟ್ ಪಕ್ಷದ ನಾಯಕರು ಮತ್ತು ಕೆಲಸಗಾರರು ಏಳೆ ಅನ್ನತ್ಯಾಗ ಮಾಡಿದರು.

× ಫೆಬ್ರವರಿ 22 ರಲ್ಲಿ ಮೈಸೂರು ಶಾಸನ ಸಭೆ ಸೇರಲಿದೆ.

ನಂತನ ಅತಿ ಚಿಕ್ಕ ಪುಸ್ತಕ

ವಾಷಿಂಗ್ಟ್ಕ 27 — ಕಳೆದ 25 ವರ್ಷಗಳಿಂದ ಅಮೇರಿಕ್ಕ ಸಂಕಾಂದ ಕಾಂಗ್ರೆಸ್ ಗ್ರಂಥಭಂಡಾಂದ 31 ದಶಲಕ್ಷ ಪುಸ್ತಕಗಳ ಪೈಕಿ ಅತಿ ಚಿಕ್ಕದು ಎಂದು ಹೆಸರು ಪಡೆದ, ಅತ್ಯಂತ ಜನಾಕರ್ಷಕವಾಗಿದ್ದ ಪುಸ್ತಕವೀಗ ಆ ಹೆಸರನ್ನು ಕಳೆದು ಕೊಂಡಿದೆ — ಈ ರಾಷ್ಟ್ರೀಯ ಗ್ರಂಥಭಾಂಡಾರದಲ್ಲಿ ಈಗ ಅತಿ ನೂತನವಾಗಿರುವ ಜನಾಕರ್ಷಣೆಯೆಂದರೆ ಬೈಬಲ್ಲಿನ ಪಂಚಮಾತ್ಮ ಪಾರ್ಥನೆಯ ಒಂದು ಪ್ರತಿ : ಇದು 11 ಪುಟದ ಪುಸ್ತಕದಲ್ಲಿ ಅಚ್ಚಾಗಿದೆ : ಇದರ ಅಳತೆ ಒಂದು ಜದರ ಇಂಚಿನ ಇಪ್ಪತ್ತನೇ ಒಂದಂಶ.

ಅತಿ ಜೋರಾಗಿ ಹೋಗುವ ವಿಮಾನ

ಕ್ಲೀವ್'ಲೆಂಡ್, ಓಹಿಯೋ— ಇಲ್ಲಿನ ಲೂಯಿಸ್' ಫ್ಲೈಟ್' ಪ್ರೊಪೆಲ್ಶನ್ ಲ್ಯಾಬೋರೇಟರಿಯಲ್ಲಿನ ವಿಜ್ಞಾನಿಗಳು, ಶಬ್ದಕ್ಕಿಂತ ನಾಲ್ಕು ಪಾಲು ಅಧಿಕ ವೇಗದಲ್ಲಿ, ಬಹಳ ಎತ್ತರಗಳಲ್ಲಿ ಗಂಟೆಗೆ ಸುಮಾರು 2600 ಮೈಲು ವೇಗದಲ್ಲಿ ಸಂಚರಿಸಬಲ್ಲ ಟರ್ಬೂಜೆಟ್ ಪ್ರಚೋದಿತ ವಿಮಾನದ ತಯಾರಿಕೆಗೆ ಶ್ರಮಿಸುತ್ತಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ಭಾರತೀಯರ ಶ್ರದ್ಧೆ

ವಾಷಿಂಗ್ಟ್ಕ್ 27— ತಮ್ಮ ಜನ್ಮಭೂಮಿಯಾದ ಭಾರತಕ್ಕೆ ಇತ್ತೀಚೆಗೆ ಸಂದರ್ಶನವಿತ್ತಾಗ, ಭಾರತದ ಜನರು ಪ್ರಜಾಪ್ರಭುತ್ವದಲ್ಲಿ ಪೂರ್ಣ ಶ್ರದ್ಧೆಯುಳ್ಳವರಾಗಿದ್ದಾರೆಂದು ಕಂಡುಕೊಂಡೆನು, ಎಂದು ಅಮೇರಿಕಾದ ಕಾಂಗ್ರೆಸ್ಸು ಸದಸ್ಯ ಡಿ. ಎಚ್. ಸಾಂದ್'ರವರು ಪತ್ರಿಕೋದ್ಯಮಿಗಳ ಕೂಟವೊಂದರಲ್ಲಿ ಹೇಳಿದ್ದಾರೆ

ವಿನೋದ

ಆಕೆ— ನಾನು ನಿನ್ನ ಹೆಂಡತಿಯಾಗಲು ನಿರಾಕರಿಸಿದರೆ, ನೀನು ನಿಜವಾಗಿಯೂ ಆತ್ಮಹತ್ಯ ಮಾಡಿಕೊಳ್ಳುವಿಯಾ ?

ಆತ— ಸದಾ ಹಾಗೆ ಮಾಡುವುದೇ ನನ್ನ ಕಾರ್ಯವಾಗಿದೆ.

ಂ ಂ ಂ ಂ

ಹುಡುಗಿ— ನನ್ನನ್ನು ಮದುವೆಯಾಗುವಂತೆ ಬಹಳ ಸಾರಿ ಕೇಳಲಾಗಿದೆ.

ಹುಡುಗ— ಯಾರ್ಯಾರು ಕೇಳಿದರು ?

ಹುಡುಗಿ— ನಮ್ಮ ಅಪ್ಪಾ ಅಮ್ಮಾ.

ಂ ಂ ಂ ಂ

ಒಬ್ಬ— ನಿನ್ನ ಹೆಂಡತಿ ಹೇಗಿದ್ದಾಳೆ ?

ಮತ್ತೊಬ್ಬ— ಅವಳು ದೇವತೆಯಾಗಿದ್ದಾಳೆ !

ಮೊದಲನೆಯವನು— ಅಯ್ಯೋ, ನನ್ನ ದುರ್ದೈವಕ್ಕೆ ನನ್ನ ಹೆಂಡತಿ ಇನ್ನೂ ಸತ್ತಿಲ್ಲ ; ಅವಳು ಎಂದಿಗೆ ದೇವತೆಯಾಗುತ್ತಾಳೋ !

ಂ ಂ ಂ ಂ

ಮೂರು ಮಂದಿ ಹಾಲಿವುಡ್ಡಿನ ಸಿನಿಮಾ ತಾರೆಯರು ಒಂದು ಶಪೆಯಾದ ಕಾತಿಯಲ್ಲಿ, ಸುತ್ತಲು ಹೊರಟು, ಒಂದು ಸುಂದರವಾದ ಕೆರೆಯ ಹತ್ತಿರ ಬಂದು ಅದನ್ನು ನೋಡಿ ಹರ್ಷಚಿತ್ತರಾಗಿ, ಅದಂಲ್ಲಿ ಸ್ವಲ್ಪ ಈಜಾಡಲು ಬಟ್ಟೆಯನ್ನು ಬಿಚ್ಚಿದರು.

ಆಗ ಅಲ್ಲಿದ್ದ ಕಾವಲುಗಾರನು— ಈ ಕೆರೆಯಲ್ಲಿ ಈಜಲು ಅವಕಾಶವಿಲ್ಲವೆಂದು ಅವರಿಗೆ ತಿಳಿಸಿದನು.

ಅವರು ಕಪಿತಂತಾಗಿ— ಮೊದಲೇ, ನಾವು ಬಟ್ಟೇ ಬಿಚ್ಚುವುದಕ್ಕೆ ಮುಂಚೆ ಹಾಗೆ ಹೇಳಬಾರದಾಗಿತ್ತು, ಎಂದು ಗದರಿಸಿದರು.

ಬಟ್ಟೇ ಬಿಚ್ಚಿದನ್ನು ಅಡ್ಡಿಪಡಿಸುವ ಕಾನೂನೇನೂ ಇಲ್ಲ ಅಮ್ಮೋರೆ ಎಂದ ಆ ಮನುಷ್ಯ !

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತವಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿ ಮಿ ಟಿ ಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ಗ್ರೈಪ್ ಸಿರಪ್

ವುಡ್'ಲಾಂಡ್ ಚಿತ್ರ 31—1—58 ರಿಂದ
ಅನೋಘ ಆರಂಭ

ಉತ್ಕೃಷ್ಟ ಕಥಾವಸ್ತುವಿನಿಂದಲೂ, ಮೃದುಮಧುರ ಸಂಗೀತದಿಂದಲೂ ಕೂಡಿದ್ದು ಪ್ರತಿಸಂಸಾರವೂ ನೋಡಿ ಆನಂದಿಸಬೇಕಾದ ಅತ್ಯುತ್ಕೃಷ್ಟ ಹಿಂದಿ ಚಿತ್ರ

Dushman ದುಷ್ಮನ್

ನಟವರ್ಗ— ದೇವಾನಂದ್, ಉಷಾಕಿರಣ್, ರಾಧಾಕಿಷನ್, ಪ್ರಭುದಯಾಲ್

ದಿನವಹಿ 3 ಪ್ರದರ್ಶನಗಳು

ಅಪೆರಾ— ವೈಭವ 7 ನೇ ವಾರ

ಮಾಯಾಬಜಾರ್

ಎಸ್ ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಜೇಲಂಗಿ
ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

ಉಮಾ ಟಾಕೀಸ್ 25—1—58 ರಿಂದ

ಕಾವೇರಿ (ತಮಿಳು) [ದಿನ 3 ಆಟಗಳು]

ನಟವರ್ಗ— ಶಿವಾಜಿ ಗಣೇಶ್, ಪದ್ಮಿನಿ, ಕೃಷ್ಣ, ಮಧುರಂ
ಬೆಳಿಗಿನ ಪ್ರದರ್ಶನ 10—30 ಕ್ಕೆ — ಶಾ || 31 ರಿಂದ 3 ದಿವಸಗಳು ಮಾತ್ರ
PATHFINDER (Technicolor Picture)

SHAKTI SUDHA A Superb Tonic

Protect the cow ಗೋ ಸಂರಕ್ಷಣೆ ಮಾಡಿ

Edited, Printed & Published by Dharma Prachara Nnaia M S Krishna Rao, at the Satyavadi Press Chamarajapuram Mysore